ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1**

ಸಂಖ್ಯೆ: ಸಿ1(4)ನಿ.ಹು.ಅ.ಪ : **47/2017–18** ದಿನಾಂಕ : **01–08–2018**

ಅಪರ ಆಯುಕ್ತರು, ಕಲಬುರಗಿ ಮತ್ತು ಧಾರವಾಡ,
ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯ ಎಲ್ಲಾ ಉಪನಿರ್ದೇಶಕರುಗಳು.

ಮಾನ್ಯರೇ,

**ವಿಷಯ:** ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಸೂಚಿತ ಹುದ್ದೆಗಳಾದ (1)ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ (ಬಿ.ಆರ್.ಸಿ) (2)ಸಹಾಯಕ ಯೋಜನಾ ಸಮನ್ವಯಾಧಿಕಾರಿ [ಎ.ಪಿ.ಸಿ](ಎಸ್.ಎಸ್.ಎ & ಆರ್.ಎಂ.ಎಸ್.ಎ) (3)ವಿಷಯ ಪರಿವೀಕ್ಷಕರು, ಮತ್ತು (4) ಸಹಾಯಕ ನಿರ್ದೇಶಕರು (ಎಂ.ಎಂ.ಎಸ್), ಪರೀಕ್ಷೆ ಬರೆದು ಆಯ್ಕೆಯಾದ ಅಭ್ಯರ್ಥಿಗಳಲ್ಲಿ ಕೌನ್ಸಲಿಂಗ್ ತೆಗೆದುಕೊಂಡು ಕರ್ತವ್ಯಕ್ಕೆ ಹಾಜರಾಗದೇ ಇರುವವರು ಅಂತರಾಯುಕ್ತಾಲಯದಲ್ಲಿ ಕೌನ್ಸಲಿಂಗ್‌ಗೆ ಹಾಜರಾಗುವ ಬಗ್ಗೆ.

**ಉಲ್ಲೇಖ** :
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 22 ಶಾಸನ 2017, ದಿನಾಂಕ:18–04–2017.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಪಿ.ಟಿ.ಆರ್. 2017, ದಿನಾಂಕ: 29–11–2017.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 16 ಇ.ಟಿ.ಆರ್. 2017, ದಿನಾಂಕ: 18–12–2017.
4. ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಸಿ1(4)ನಿ.ಹು.ಅ.ಪ. 47:2017–18, ದಿನಾಂಕ: 14–02–2018.
5. ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಸಿ1(4)ನಿ.ಹು.ಅ.ಪ/47/2017–18, ದಿನಾಂಕ: 18–07–2018.

&&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳಡಿ ಅಧಿಸೂಚಿತ ಹುದ್ದೆಗಳಾದ (1)ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ (ಬಿ.ಆರ್.ಸಿ) (2)ಸಹಾಯಕ ಯೋಜನಾ ಸಮನ್ವಯಾಧಿಕಾರಿ [ಎ.ಪಿ.ಸಿ](ಎಸ್.ಎಸ್.ಎ & ಆರ್.ಎಂ.ಎಸ್.ಎ) (3)ವಿಷಯ ಪರಿವೀಕ್ಷಕರು, ಮತ್ತು (4) ಸಹಾಯಕ ನಿರ್ದೇಶಕರು (ಎಂ.ಎಂ.ಎಸ್) ಈ 04 ಹುದ್ದೆಗಳಿಗೆ ಸರ್ಕಾರವು ನೀಡಿರುವ ಪಠ್ಯಕ್ರಮದಂತೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಿ ಅರ್ಹ ಅಧಿಕಾರಿಗಳಿಗೆ ಈಗಾಗಲೇ ದಿನಾಂಕ: 24–07–2018, 26–07–2018, 27–07–2018ರಂದು ಕೌನ್ಸಿಲಿಂಗ್ ನಡೆಸಲಾಗಿರುತ್ತದೆ. ಈ ಪೈಕಿ ಕೌನ್ಸಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡು ಕರ್ತವ್ಯಕ್ಕೆ ಹಾಜರಾಗದೇ ಇರುವ ಅಧಿಕಾರಿಗಳು ಮತ್ತು ಪರೀಕ್ಷೆಯಲ್ಲಿ ಅರ್ಹತಾ ಅಂಕಗಳನ್ನು ಪಡೆದು ಅರ್ಹರಿರುವವರು ಅಂತರಾಯುಕ್ತಾಲಯಕ್ಕೆ ಹೋಗಲು ಇಚ್ಚಿಸಿದಲ್ಲಿ ಅವರುಗಳ ಪೂರ್ಣ ವಿವರ ಹಾಗೂ ಅವರು ಆಯ್ಕೆಯಾದ ಹುದ್ದೆಗಳ ವಿವರ ಹಾಗೂ ತಮ್ಮ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಈಗ ಹಾಲಿ ಖಾಲಿ ಉಳಿದ ಹುದ್ದೆಗಳ ವಿವರದೊಂದಿಗೆ ಮತ್ತು ಅಂತರಾಯುಕ್ತಾಲಯಕ್ಕೆ ಹೋಗಲು ಇಚ್ಚೆ ವ್ಯಕ್ತಪಡಿಸಿದವರಲ್ಲಿ 10ವರ್ಷ ಮೇಲ್ಪಟ್ಟು ಎ–ವಲಯದಲ್ಲಿ ಕೆಲಸ ಮಾಡುತ್ತಿರುವವರ ಪ್ರತ್ಯೇಕ ವಿವರ, ಉಳಿದವರ ಪ್ರತ್ಯೇಕ ವಿವರದೊಂದಿಗೆ ಈ ಕಾರ್ಯಾಲಯಕ್ಕೆ ಮುದ್ದಾಂ ಸಲ್ಲಿಸಲು ಸಂಬಂಧಿಸಿದ ಹಿರಿಯ ಸಹಾಯಕ ನಿರ್ದೇಶಕರನ್ನು ನಿಯೋಜಿಸುವುದು. ಮತ್ತು ನಿರ್ದಿಷ್ಟವಾಗಿ ಇವರು ಯಾವ ಆಯುಕ್ತಾಲಯದ ವ್ಯಾಪ್ತಿಗೆ ಹೋಗಲು ಇಚ್ಚೆ ವ್ಯಕ್ತಪಡಿಸುತ್ತಾರೆ ಎಂಬ ಮಾಹಿತಿಯೊಂದಿಗೆ ಪೂರ್ಣ ಮಾಹಿತಿಯನ್ನು ದಿನಾಂಕ:04–08–2018ರೊಳಗೆ ಮುದ್ದಾಂ ಕಳುಹಿಸುವುದು.

ಅದರಂತೆ ನೀವು ಸಲ್ಲಿಸಿದ ಮಾಹಿತಿಯನ್ನು ಪರಿಶೀಲಿಸಿ ಅರ್ಹರಾದವರಿಗೆ ದಿನಾಂಕ:08–08–2018ರಂದು ಇವರೆಲ್ಲರಿಗೂ ಬೆಂಗಳೂರು ಆಯುಕ್ತಾಲದ ಆಯುಕ್ತರ ಕಛೇರಿಯಲ್ಲಿ ಕೌನ್ಸಿಲಿಂಗ್ ನಡೆಸಲಾಗುವುದು.

ಬೆಂಗಳೂರು ಆಯುಕ್ತಾಲದ ವ್ಯಾಪ್ತಿಯ ಉಪನಿರ್ದೇಶಕರುಗಳು ಸಹ ಈ ಮೇಲಿನಂತೆ ಪರಿಶೀಲಿಸಿ ವಿವರ ಸಲ್ಲಿಸುವುದು.

**[ಡಾ॥ಪಿ.ಸಿ.ಜಾಫರ್]**
**ಆಯುಕ್ತರು,**

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು, ಜಂಟಿ ನಿರ್ದೇಶಕರು,
4. ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ